ಏಕೆಂದರೆ ಅದನ್ನು ಹಾಸ್ಯಾಸ್ಪದ, ಫ್ಯಾಕ್ಟ್ಸ್‌ನ್ನು ಹೇಳಿಲ್ಲ, ಶಂಕರಾಚಾರ್ಯರನ್ನು ಹೇಳಿದರು, ಮಧ್ವಾಚಾರ್ಯರನ್ನು ಹೇಳಿದರು, ಬಸವಣ್ಣನವರನ್ನು ಹೇಳಿದರು ಆ ತರಹ ಏಕೆಂದರೆ ರಸಿಕ ಇದ್ದರೆ ಕಾವ್ಯ ಹಾಡಬಹುದು, ಅರಸಿಕನಿಗೆ ಕಾವ್ಯ ಹಾಡತಕ್ಕಂಥ ಶಿಕ್ಷೆ ಕೊಡಬೇಡಪ್ಪ ದೇವರೇ ಎಂದು ಕವಿ ಕೇಳುತ್ತಾನೆ. ಅದಕ್ಕೋಸ್ಕರ ಇವತ್ತು I do agree. But, factually I was more elaborate than my previous speeches. ಏನಾದರೂ ಇದ್ದರೆ ಮುಂದಿನ ಅಧಿವೇಶನದಲ್ಲಿ ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ಮಾಟಾಳ್ ನಾಗರಾಜ್‌ರಂಥ ರಸಿಕರು ಇದ್ದಾಗಲೂ ಏಕೆ ಹೋಗಬೇಕು, ಅವರ ಕುರಿತು ಆದರೂ ಹೇಳಬಹುದಲ್ಲಾ, ನಾವಾದರೂ ಅರಸಿಕರು...

ಶ್ರೀ ಮಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರು ಎಷ್ಟು ರಸಿಕರೆಂಬುದು ನಮಗೆ ಗೊತ್ತಿದೆ. ಅವರನ್ನು ರಸಿಕರು ಅಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ರಸಿಕತೆಯಲ್ಲಿ ಅನುಭವವಿದೆ. ಸಮಾಜವಾದಿಗಳೆಲ್ಲಾ ರಸಿಕರೇ, ಅದನ್ನು ತಳ್ಳಿ ಹಾಕುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಜಂಟಿ ಸದನ ಸಮಿತಿ ಮಾಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡುತ್ತಾರೆ ? ಜಂಟಿ ಸದನ ಸಮಿತಿ ಮಾಡಲಿಲ್ಲವೆಂದರೆ, there is no alternative. We have to sit there.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಶ್ರೀ ಹೆಚ್. ಎನ್. ನಂಜೇಗೌಡ ಅವರು ಸದನದ ಬಾವಿಗೆ ಆಗಮಿಸಿ ಧರಣಿ ಹೂಡಿದರು. ಹಾಗೂ ಬಿ.ಜೆ.ಪಿ. ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಮುಗಿಯಿತು. ಪ್ರಸ್ತಾವನೆಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ

"8ನೇ ಮಾರ್ಚ್ 1999 ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ. "

ಪ್ರಸ್ತಾವವನ್ನು ಅಂಗೀಕರಿಸಲಾಗಿದೆ

ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

3. ಶಾಸನ ರಚನೆ

ವಿಧೇಯಕದ ಮಂಡನೆ ಹಾಗೂ ಅಂಗೀಕಾರ

ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕ, 1999

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ;

" 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 1999 ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಅಧ್ಯಕ್ಷರು : * ವಿಧೇಯಕವನ್ನು ಮಂಡಿಸಲಾಗಿದೆ.*

1.50 ಪಿ.ಎಂ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಅಧ್ಯಕ್ಷರೆ, ಸರ್ಕಾರಕ್ಕೆ ಗ್ಯಾರಂಟಿ ಕೊಡುವುದರ ಮೇಲೆ ಒಂದು ಮಿತಿ ಇರಬೇಕು ಎಂದು ಮಾಡಿದ್ದೇವೆ. ಇದರ ಪ್ರಕಾರ ರೆವಿನ್ಯೂ ರೆಸೀಟ್ಸ್ ಎಷ್ಟು ಇರುತ್ತದೆ ಅದರಲ್ಲಿ ಶೇಕಡ 80ಕ್ಕಿಂತ ಹೆಚ್ಚು ಹೋಗಬಾರದು. ಒಂದು ವೇಳೆ ಹೋಗಬೇಕಾದರೆ ಅದು ಲೆಜಿಸ್ಲೇಚರ್‌ಗೆ ಬರಬೇಕು. ಲೆಜಿಸ್ಲೇಚರ್‌ಗೆ ಕೊಟ್ಟರೆ ಮಾತ್ರ ಪವರ್ ಇರುತ್ತದೆ ಮತ್ತು ಸರ್ಕಾರದ ಮೇಲೆ ಆರ್ಥಿಕ ಶಿಸ್ತು ಬರುತ್ತದೆಂದು ಈ ಒಂದು ವಿಧೇಯಕವನ್ನು ತಂದಿದ್ದೇವೆ. ಇದು ಬಹಳ ಸರಳವಾಗಿರತಕ್ಕಂಥ ವಿಧೇಯಕ. ಇದಕ್ಕೆ ತಾವು ಎಲ್ಲರೂ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ...

ಪರ್ಯಾಲೋಚನ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) : ಅಧ್ಯಕ್ಷರೆ, 1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"1999ರ ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

* ಸಹಬಂಧ I